# ಎನ್‌ಐಟಿಕೆಯಲ್ಲಿ ಕಾರ್ಯಾಗಾರ

**ಮಂಗಳೂರು:** ಎಂಎಸ್‌ಎಂಇ ಸಚಿವಾಲಯದ ಸೆಂಟರ್ ಫಾರ್ ಸಿಸ್ಟಂ ಡಿಸೈನ್, ಎನ್‌ಐಟಿಕೆ ಸುರತ್ಕಲ್ ಮತ್ತು ಎಂಎಸ್‌ಎಂಇ ಡಿಎಫ್‌ಒ ಮಂಗಳೂರು ಸದರ ಸಹಭಾಗಿತ್ವದಲ್ಲಿ ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ಇಂದು (ಮಾ.21) ಮತ್ತು ಮಾ.22ರಂದು ವಿನ್ಯಾಸಗಳ ಕುರಿತು ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ಈ ಕಾರ್ಯಾಗಾರದಲ್ಲಿ ವಿಪ್ರೋ 3ಡಿ, ಲುಸಿದ್ ಇಂಜಿನಿಯರಿಂಗ್, ಎನ್‌ಐಡಿ ಅಹಮದಾಬಾದ್ ಮತ್ತು ಎನ್‌ಐಟಿಕೆ ಪದವೀಧರರು, ಯಶಸ್ವಿ ಎಂಎಸಂಎಂಇಗಳು ಭಾಗವಹಿಸಲಿದ್ದು, ಪರಿಣತರು ಉಪನ್ಯಾಸಗಳನ್ನು ನೀಡಲಿದ್ದಾರೆ. ಕಾರ್ಯಾಗಾರವು ಸಂಪೂರ್ಣವಾಗಿ ಉಚಿತವಾಗಿದೆ. ಈ ಕಾರ್ಯಾಗಾರದಲ್ಲಿ ಭಾಗವಹಿಸಲು ಇಚ್ಛಿಸುವವರು ಆನ್‌ಲೈನ್ ಅಥವಾ ಸ್ಥಳದಲ್ಲೇ ಹೆಸರು ನೋಂದಾಯಿಸಿಕೊಳ್ಳಬಹುದು.

ಎಂಎಸ್‌ಎಂಇ, ಡಿಎಫ್‌ಒ, ಮಂಗಳೂರಿನ ಜಂಟಿ ನಿರ್ದೇಶಕ ದೇವರಾಜ್ ಕೆ, ಸಹಾಯಕ ಪ್ರಾಧ್ಯಾಪಕ ಡಾ.ಬಿಜುನ ಸಿ ಮೋಹನ್ ಮತ್ತು ಜಲಸಂಪನ್ಮೂಲ ಮತ್ತು ಸಾಗರ ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಪೃಥ್ವಿರಾಜ್ ಉಮೇಶ್ ಕಾರ್ಯಾಗಾರವನ್ನು ಸಂಯೋಜಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

Hosa Diganta, Date: 21/03/23 p,no - 16